*ಡಾ॥ ಆರ್. ನಾಗನಗೌಡ.—ಆ ಪ್ರದೇಶದಲ್ಲಿ ಆ ರೀತಿ ಮೇಕೆಗಳನ್ನೂ ಕೂಡ ಬಿಟ್ಟು ಮೇಯಿಸಬಾರದೆಂದು ಅವರು ವರದಿಮಾಡಿದ್ದಾರೆ. ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಲ್ಲಿಗೆ ಆ ರೈತರ ಕಷ್ಟಪರಿಹಾರವಾಯಿತೇ ಎಂದು ಕೇಳುತ್ತಿದ್ದೇನೆ.

ಡಾ॥ ಆರ್. ನಾಗನಗೌಡ.—ಹಾಗೆ ನೋಡಿದರೆ ಆ ಉದ್ದೇಶಕ್ಕಾಗಿ ನಾವು ನಮ್ಮ ಫಾರೆಸ್ಟನ್ನು ಬಿಟ್ಟು ಕೊಡಬೇಕಾಗುತ್ತದೆ. ಆ ರೀತಿ ಮಾಡಲು ಸಾಧ್ಯವಿಲ್ಲವೆಂಬುದಾಗಿ ಸರ್ಕಾರದವರ ಅಭಿಪ್ರಾಯವಿದೆ. ಹಾಗೆ ಅಲ್ಲಿ ಬಿಟ್ಟುಕೊಟ್ಟರೆ ಇನ್ನು ಳಿದ ಫಾರೆಸ್ಟಿನ ಅಭಿವೃದ್ಧಿಗೂ ಕೂಡ ಬಹಳ ಧಕ್ಕೆ ಉಂಟಾಗುತ್ತದೆಂದು ವರದಿ ಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಪ್ರದೇಶವನ್ನು ಬಿಟ್ಟರೆ ಅಲ್ಲಿ ಈ ಗೋಮಾಳಕ್ಕೆ ಬೇರೆ ಯಾವ ಪ್ರದೇಶವೂ ಇರುವುದಿಲ್ಲವೆಂಬ ಅಂಶ ತಮಗೆ ಗೊತ್ತಿದೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲಿಯ ತನಕ ಅಲ್ಲವ್ಯಂಥ ಗೋಮಾಳ ಪ್ರದೇಶವನ್ನೆಲ್ಲಾ ಸಾಗುವಳಿ ಗೋಸ್ಕರವಾಗಿ ಜನರು ಹಿಡುವಳಿ-ಪಟ್ಟಿಗಳನ್ನು ಮಾಡಿಸಿಕೊಂಡು ಬಿಟ್ಟಿದ್ದಾರೆ. ಈಗ ಫಾರೆಸ್ಟಿನಲ್ಲಿ ಪುನಃ ಗೋಮಾಳಕ್ಕೆ ಜಾಗ ಕೊಡಿ ಎಂದು ಕೇಳುತ್ತಿದ್ದಾರೆ. ಈ ರೀತಿ ಆದರೆ ಕೊನೆಗೆ ನಮ್ಮ ಅರಣ್ಯಗಳೊಂದೂ ಉಳಿಯುವುದೇ ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗೆ ತಾವೇಕೆ ಮೊದಲು ಆ ಗೋಮಾಳ ಪ್ರದೇಶವನ್ನು ಸಾಗುವಳಿಗೆ ಬಿಟ್ಟುಕೊಟ್ಟಿರಿ ?

ಡಾ॥ ಆರ್. ನಾಗನಗೌಡ.—ಸಾಗುವಳಿಗೆ ಜಮೀನು ಬೇಕೆಂದು ಕೇಳಿದರು. ಅದಕ್ಕಾಗಿ ಕೊಚ್ಚೆವು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಮ್ಮ ಬಳಿಗೆ ಬಂದಿದ್ದವಂಥ ಆ ನಿಯೋಗ ತಮ್ಮನ್ನೇ ಆ ಸ್ಥಳಕ್ಕೆ ಖುದ್ದಾಗಿ ಬಂದು ಭೇಟಿಕೊಟ್ಟು ಸ್ಥಳದ ಪರಿಸ್ಥಿತಿಯನ್ನು ಪರಾಂಬರಿಸಬೇಕೆಂದು ಕೇಳಿಕೊಂಡಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು. ಆದರೆ ನನಗೆ ವೇಳೆ ಆಗದೆ ಬರಲಿಲ್ಲ. ಆದರೆ ಆ ಸ್ಥಳವನ್ನು ನಮ್ಮ ಅಧಿಕಾರಿಗಳು ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಆ ಪ್ರದೇಶದ ನಕ್ಷೆ, ಭೂಪಟಗಳೆಲ್ಲಾ ನನ್ನ ಬಳಿ ಈಗ ಇರುತ್ತವೆ. ಆದರೆ ಏನು ಮಾಡುವುದಕ್ಕೂ ಅವಕಾಶವಿಲ್ಲ.

Sri H. K. SHIVARUDRAPPA.—Will the Government consider this request at least now ? Will the Hon'ble Minister inspect the forest ?

Dr. R. NAGAN GOWDA.—It is not necessary. I think that would be understood from the sketches. If you go about and tour, there will be criticism in this House.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ತಾವು ಅಲ್ಲಿಗೆ ಬಂದು ಪರೀಕ್ಷೆ ಮಾಡುವುದಕ್ಕೆ ತಮಗೇನು ತೊಂದರೆಯಿದೆ ?

ಡಾ॥ ಆರ್. ನಾಗನಗೌಡ.—ನಾವು ಹಾಗೆ ಟೂರ್ ಹೊರಟರೆ ಈ ಅಸೆಂಬ್ಲಿಯಲ್ಲಿ ತಾವೆಲ್ಲರೂ ಟಿ.ಎ. ಜಾಸ್ತಿ ಮಾಡುತ್ತೀರೆಂದು ಟೀಕೆ ಮಾಡುತ್ತಿದ್ದೀರಲ್ಲವೇ ?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅವಶ್ಯಕವಾದಂಥ ಟೂರ್ ಯಾವುದು ಅನಾವಶ್ಯಕವಾದಂಥ ಟೂರ್ ಯಾವುದು ಅನ್ನುವುದನ್ನು ನೋಡದೆ ಟೀಕೆ ಮಾಡುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಟೂರ್ ಮಾಡಿದ್ದಕ್ಕೆಲ್ಲಾ ಟೀಕೆಗಳು ಬಂದೇ ಬರುತ್ತವೆ. ನೀವು ಮಾಡದಿದ್ದರೆ ಮತ್ತೊಬ್ಬರು ಮಾಡಬಹುದು. ಆದರೆ ಅದೆಲ್ಲಾ ಈಗ ಅನಾವಶ್ಯಕ. ಈಗಾಗಲೇ ನಾವು ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಆ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಿದ್ದೆವು. The opinion of the departmental officers is not to release that land. I do not see any purpose will be served by my going and visiting that land. I can exactly understand the situation.

---

1 P.M.

Bridge across Suvarnavathi near Alur, Chamarajanagar Taluk.

Q.—51. **Sri B. RACHIAH** (Yelandur-Scheduled Castes).—

Will the Government be pleased to state :—

whether they have considered the several representations made both on the floor of this House and outside to construct a bridge across Suvarnavathi near Alur in Chamarajanagar Taluk at least out of the Central aid ?

A.—**Sri T. CHANNIAH** (Minister for Public Health and Local Self-Government).—

Yes.

ಶ್ರೀ ಬಿ. ರಾಚಯ್ಯ.—ಈ ಸೇತುವೆಯ ಅಂದಾಜಿನ ಮೊಬಲಗು ಎಷ್ಟು, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—1948 ನೇ ಇಸವಿಯಲ್ಲಿ 1 ಲಕ್ಷ 13 ಸಾವಿರ ರೂಪಾಯಿಗೆ ಅಂದಾಜಾಗಿದೆ.

ಶ್ರೀ ಬಿ. ರಾಚಯ್ಯ.—ಇದು ಸೇತುವೆಗೋ ಅಥವಾ ಕಾಸ್‌ವೇಗೋ ಯಾವುದಕ್ಕೆ ?

ಶ್ರೀ ಟಿ. ಚನ್ನಯ್ಯ.—ಸೇತುವೆಗೆ 1 ಲಕ್ಷ 13 ಸಾವಿರ ರೂಪಾಯಿಗಳ ಅಂದಾಜು 1948 ನೇ ಇಸವಿಯಲ್ಲಿ ಆಗಿದೆ.

Mr. SPEAKER.—Now there is a short notice question by Sri H. C. Linga Reddy.